ದಿನಾಂಕಃ 30-05-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ವಿ.ಕೆ ವಕೀಲರಿಂದಃ**

ಗುರುಲಿಂಗಪ್ಪ ಕಳ್ಳಿಹಾಳ ನಮ್ಮ ಮನೆತನದ ಮೂಲ ಪುರುಷ ಎಂದರೆ ಸರಿ. ಸದರಿ ಮೂಲ ಪುರುಷನಿಗೆ 4 ಜನ ಗಂಡುಮಕ್ಕಳು ಎಂದರೆ ಸರಿ. 1960 ನೇ ಇಸ್ವಿಯಲ್ಲಿ ಸದರಿ ಮೂಲ ಪುರುಷನ 4 ಜನ ಗಂಡುಮಕ್ಕಳ ಮಧ್ಯ ಮನೆತನದ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಾನು ಸದರಿ ಮೂಲ ಪುರುಷನ 4 ಜನ ಗಂಡುಮಕ್ಕಳ ಮಧ್ಯ ಕುಟುಂಬದಲ್ಲಿ ವಿಭಾಗವಾಗಿ ದಾವಾ ಸ್ವತ್ತಿನ ಕ್ರಮ ಸಂಖ್ಯೆ .1 ರ ಆಸ್ತಿಯಾದ ಸರ್ವೇ ನಂ.238/1 ಎ ರ 4 ಎಕರೆ ಜಮೀನು ಸದರಿ ಮೂಲ ಪುರುಷನ 2 ನೇ ಮಗನಾದ ಬಸಪ್ಪನ ಪಾಲಿಗೆ ಬಂದಿತ್ತು ಎಂದು ನಾನು ಉಲ್ಲೇಖಿಸಿರುವುದಿಲ್ಲ. ಈ ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಈ ದಾವೆಯ ದಾವಾ ಸ್ವತ್ತು ಹಾಗು ಬೇರೆ ಆಸ್ತಿಗಳಿಗೊಸ್ಕರ ಅದೇ ನ್ಯಾಯಾಲಯದಲ್ಲಿ O.S No.117/2012 ರ ದಾವೆಯನ್ನು ವಿಭಾಗಕ್ಕೊಸ್ಕರ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ದಿಃ 01-08-2018 ರಂದು ವಜಾಗೊಂಡಿದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ಧ ನಾನು ರಾಣೇಬೆನ್ನೂರಿನ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ R.A No.106/2018 ರ ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ರಾಣೇಬೆನ್ನೂರಿನ ಮಾನ್ಯ ಜಿಲ್ಲಾ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಮತ್ತು ಸಂಬಂಧಪಟ್ಟ ವ್ಯಾಪ್ತಿ ಪ್ರದೇಶದ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಆದೇಶ ಮಾಡಿ ಸದರಿ ಮೇಲ್ಮನವಿಯನ್ನು ಹಿಂದಿರುಗಿಸಲಾಗಿದೆ ಎಂದರೆ ಸರಿ. ಸದರಿ R.A No.106/2018 ರಲ್ಲಿ ಆದ ಆದೇಶದ ವಿರುದ್ದ ನಾನು ಮಾನ್ಯ ಉಚ್ಛ

ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. O.S No.117/2012 ರಲ್ಲಿ ಆದ ತೀರ್ಪು ಇಲ್ಲಿಯವರೆಗೆ ರದ್ದುಗೊಳಿಸಲಾಗಿರುವುದಿಲ್ಲ ಹಾಗು ಸದರಿ ತೀರ್ಪು ಇಂದಿನ ದಿನದವರೆಗೂ ಸಹ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತುಗಳಾದ ಸರ್ವೇ ನಂ.238/1 ಎ ರ 4 ಎಕರೆ ಜಮೀನು ಮತ್ತು ಅಸುಂಡಿ ಗ್ರಾಮದ ವಿ.ಪಿ.ಸಿ ನಂ.362 ರ ಆಸ್ತಿಗಳ ಮೇಲೆಯೇ ನಾನು ಸದರಿ O.S No.117/2012 ರ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ O.S No.117/2012 ರಲ್ಲಿ ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ಸದರಿ O.S No.117/2012 ರ ದಾವೆಯನ್ನು ನಾನು ಸಲ್ಲಿಸುವ ಪೂರ್ವದಲ್ಲಿ ನಾನು ಹಾಗು ಈ ದಾವೆಯ 1 ನೇ ಪ್ರತಿವಾದಿಯಾದ ಬಸವರಾಜಪ್ಪ ರವರು ಸೇರಿಕೊಂಡು ರಾಣೇಬೆನ್ನೂರಿನ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ O.S No.305/2008 ರ ದಾವೆಯನ್ನು ವಿಭಜನೆಗೋಸ್ಕರ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ದಾವೆಯ ದಾವಾ ಸ್ವತ್ತು ಸಹ ಈ ದಾವೆಯ ದಾವಾ ಸ್ವತ್ತುಗಳಾದ ಸರ್ವೇ ನಂ.238/1 ಎ ರ 4 ಎಕರೆ ಜಮೀನು ಮತ್ತು ಅಸುಂಡಿ ಗ್ರಾಮದ ವಿ.ಪಿ.ಸಿ ನಂ.362 ರ ಆಸ್ತಿ ಆಗಿತ್ತು ಎಂದರೆ ಸರಿ. ಸದರಿ O.S No.305/2008 ರ ದಾವೆಯನ್ನು ನಾವೇ ಅರ್ಜಿಯನ್ನು ಸಲ್ಲಿಸಿ ಸದರಿ ದಾವಾ ಸ್ವತ್ತುಗಳೊಂದಿಗೆ ತಮ್ಮ ಕುಟುಂಬದ ಸಂಪೂರ್ಣ ಆಸ್ತಿಗಳನ್ನು ಸೇರಿಸಿಕೊಂಡು ದಾವೆ ಸಲ್ಲಿಸುವ ಸಲುವಾಗಿ ಹಿಂದಕ್ಕೆ ಪಡೆದುಕೊಂಡು ಪುನಃ ಬೇರೊಂದು ದಾವೆಯನ್ನು ಸಲ್ಲಿಸಲು ಅನುಮತಿಯನ್ನು ಕೋರಿ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ.

ಈ ದಾವೆಯ ದಾವಾ ಸ್ವತ್ತುವಾದ ಸರ್ವೇ ನಂ.*238/1* ಎ ರ *4* ಎಕರೆ ಜಮೀನು ಈಗ ಈ ದಾವೆಯ *1* ನೇ ಪ್ರತಿವಾದಿ ಗಂಗಾಧರನ ಹೆಸರಿನಲ್ಲಿ ಇದೆ . *2008* ನೇ

ಇಸವಿಯಲ್ಲಿಯೇ ನನಗೆ ಸದರಿ ದಾವಾ ಸ್ವತ್ತು ಸದರಿ ಗಂಗಾಧರನ ಹೆಸರಿನಲ್ಲಿ ಇದೆ ಎಂದು ಗೊತ್ತಾಗಿತ್ತು ಎಂದರೆ ಸರಿ. ದಾವಾ ಸ್ವತ್ತು ಸದರಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ನನಗೆ 2008 ನೇ ಇಸವಿಯಲ್ಲಿ ಗೊತ್ತಾದ ನಂತರ 2018 ರವರೆಗೆ ನಾನು ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ ಈ ದಾವೆಯ ದಾವಾ ಸ್ವತ್ತುಗಳು ಮೂಲ ಪುರುಷನ ಮೊಮ್ಮಗನಾದ ಚೆನ್ನಬಸಪ್ಪ ತಂದೆ ಬಸಪ್ಪ ರವರಿಗೆ ಸಂಬಂಧಪಟ್ಟ ಆಸ್ತಿಗಳು ಆಗಿವೆ ಎಂದರೆ ಸರಿ . ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ ರವರು ಅಸುಂಡಿ ಗ್ರಾಮದಲ್ಲಿ ದಿಃ 28-03-1995 ರಂದು ಮರಣ ಹೊಂದಿದ್ದಾರೆ ಎಂದರೆ ಸರಿ. ಸದರಿ ಚೆನ್ನಬಸಪ್ಪ ರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿ. ಸದರಿ ಚೆನ್ನಬಸಪ್ಪನ ಯೋಗಕ್ಷೇಮವನ್ನು ಸದರಿ 1 ನೇ ಪ್ರತಿವಾದಿ ಗಂಗಾಧರ ಮಾತ್ರ ಮಾಡುತ್ತಿದ್ದ ಎಂದರೆ ಸರಿಯಲ್ಲ , ಸಾಕ್ಷಿ ಮುಂದುವರೆದು ಎಲ್ಲರೂ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ . ಸದರಿ ಚೆನ್ನಬಸಪ್ಪ ತನ್ನ ಮರಣದ ನಂತರ ತನ್ನ ಆಸ್ತಿಗಳು ಅಂದರೆ ಈ ದಾವೆಯ ದಾವಾ ಸ್ವತ್ತುಗಳು ಸದರಿ 1 ನೇ ಪ್ರತಿವಾದಿ ಗಂಗಾಧರನಿಗೆ ಹೋಗಬೇಕು ಎನ್ನುವ ವಿಚಾರವನ್ನು ಹೊಂದಿದ್ದ ಎಂದರೆ ಸರಿಯಲ್ಲ. ಸದರಿ ಚೆನ್ನಬಸಪ್ಪ ರವರು M.E (ಡ) No.3251 ರ ಮುಖಾಂತರ ಅಸುಂಡಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸದರಿ 1 ನೇ ಪ್ರತಿವಾದಿ ಗಂಗಾಧರನ ಹೆಸರಿಗೆ ವರ್ಗಾವಣೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಸದರಿ ಚೆನ್ನಬಸಪ್ಪನ ಮರಣ ನಂತರ M.E (ಡ) No.3251 ರ ಆದೇಶದ ಮೇರೆಗೆ ಸದರಿ 1 ನೇ ಪ್ರತಿವಾದಿ ಗಂಗಾಧರನ ಹೆಸರಿಗೆ M.E (ಡ) No.3401 ರ ಮುಖಾಂತರ ದಾವಾ ಸ್ವತ್ತುಗಳು ವರ್ಗಾವಣೆ ಆಗಿವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒತ್ತಾಯದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ .

ನಾನು ಹುಟ್ಟಿದ್ದು ಹಾಗು ಬೆಳೆದಿದ್ದು ಎಲ್ಲಾ ಅಸುಂಡಿ ಗ್ರಾಮದಲ್ಲಿಯೇ ಎಂದರೆ ಸರಿ. ನಾನು ಖಾಯಂ ತರಿಕ್ ಅಸುಂಡಿ ಗ್ರಾಮದಲ್ಲಿಯೇ ವಾಸವಾಗಿರುವ ಕಾರಣಕಾಕಗಿ

ದಾವಾ ಸ್ವತ್ತುಗಳು ಯಾವಾಗ ಮತ್ತು ಹೇಗೆ ಯಾರ ಹೆಸರಿಗೆ ಬದಲಾವಣೆ ಆಗಿವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ ,ಸಾಕ್ಷಿ ಮುಂದುವರೆದು ಇತ್ತಿಚಿನ ಬದಲಾವಣೆ ಮಾತ್ರ ತನಗೆ ಗೊತ್ತಿವೆ ಎಂದು ನುಡಿಯುತ್ತಾರೆ . 1994-95 ನೇ ಇಸವಿಯಲ್ಲಿ ನನಗೆ 32 ರಿಂದ 33 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಸದರಿ 1994-95 ನೇ ಇಸವಿಯಲ್ಲಿ ದಾವಾ ಸ್ವತ್ತುಗಳನ್ನು ಸದರಿ ಮೂಲ ಪುರುಷನ 1 ನೇ ಶಾಖೆಯಾದ ಭರಮಪ್ಪನ ಪಾಲಿಗೆ 1960 ಇಸವಿಯಲ್ಲಿ ಆದ ವಿಭಾಗದ ಪ್ರಕಾರ ಬಂದಂತಹ ಆಸ್ತಿಗಳನ್ನು ನಾನೇ ಸ್ವತಃ ಸಾಗುವಳಿ ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ , ಸಾಕ್ಷಿ ಮುಂದುವರೆದು ಸದರಿ ಮೂಲ ಪುರುಷನ 4 ಜನ ಗಂಡು ಮಕ್ಕಳ ಶಾಖೆಯ ವಾರಸುದಾರರು ಸಾಗುವಳಿ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ . ಕುಟುಂಬದಲ್ಲಿ 1960 ಇಸವಿಯಲ್ಲಿಯೇ ವಿಭಾಗವಾದ ನಂತರವೂ ಸಹ 1994-95 ಇಸವಿಯಲ್ಲಿ ಸದರಿ ಮೂಲ ಪುರುಷನ ಎಲ್ಲಾ ಮಕ್ಕಳ ವಾರಸುದಾರರು ಜಂಟಿಯಾಗಿ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದರು ಎನ್ನುವ ಬಗ್ಗೆ ನಾನು ನನ್ನ ವಕೀಲರಿಗೆ ದಾವಾ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನೀಡಿರುವುದಿಲ್ಲ . ದಿಃ 06-07-1995 ರಿಂದ ಇಲ್ಲಿಯವರೆಗೆ ದಾವಾ ಸ್ವತ್ತು 1 ನೇ ಪ್ರತಿವಾದಿ ಗಂಗಾಧರನ ತಾಬಾ(ಸ್ವಾಧೀನ)ದಲ್ಲಿಯೇ ಇದೆ ಎಂದರೆ ಸರಿ. ಸದರಿ ದಾವಾ ಸ್ವತ್ತುಗಳನ್ನು ಸದರಿ ಚೆನ್ನಬಸಪ್ಪ ತನ್ನ ಮೃತ್ಯು ಪತ್ರದ ಮುಖಾಂತರ ಸದರಿ 1 ನೇ ಪ್ರತಿವಾದಿಯಾದ ಗಂಗಾಧರನ ಹೆಸರಿಗೆ ಮಾಡಿಸಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಜಮೀನಿಗೆ ಸಂಬಂಧಪಟ್ಟ ಪಹಣಿ(ಉತಾರೆ)ಯನ್ನು ನಾನು ನೋಡಿದ್ದೇನೆ . 2011-12 ನೇ ಸಾಲಿನ ಸದರಿ ಪಹಣಿ (ನಿ.ಪಿ-4) ಯಲ್ಲಿ ಸದರಿ ಗಂಗಾಧರ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ , ಅಸುಂಡಿ ಶಾಖೆಯಿಂದ ಸದರಿ

ಜಮೀನಿನ ಮೇಲೆ ಸಾಲವನ್ನು ಪಡೆದುಕೊಂಡಿದ್ದಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಜಮೀನು ಮತ್ತು ಮನೆಯಲ್ಲಿ 1995 ರಿಂದ ಇವತ್ತಿನವರೆಗೆ ಸದರಿ ಗಂಗಾಧರನೇ ಮಾಲೀಕನ ನಾಥೆಯಿಂದ ಸ್ವಾಧೀನದಲ್ಲಿ ಇದ್ದಾನೆ ಎಂದರೆ ಸರಿಯಲ್ಲ . ಸದರಿ 1 ನೇ ಪ್ರತಿವಾದಿ ಗಂಗಾಧರ ಹುಬ್ಬಳ್ಳಿಯ ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ ಎಂದರೆ ಸರಿ.

**(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನದವರೆಗೆ ಮುಂದುಾಡಲಾಗಿದೆ )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

ಮದ್ಯಾಹ್ನ ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ವಿ.ಕೆ ವಕೀಲರಿಂದಃ**

ದಾವಾ ಸ್ವತ್ತು ಸರ್ವೇ ನಂ.238/1 ಎ ರ 4 ಎಕರೆ ಜಮೀನಿನ ಮೌಲ್ಯ ಈಗ ಪ್ರತಿ ಎಕರೆಗೆ 3 ರಿಂದ 4 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಉಪನೊಂದಣಿ ಕಚೇರಿಯವರ ಮೌಲ್ಯಂಕದ ಪ್ರಕಾರ ಪ್ರತಿ ಎಕರೆಗೆ 1 ರಿಂದ 1 ½ ಲಕ್ಷ ರೂಪಾಯಿ ಸದರಿ ಜಮೀನಿನ ಮೌಲ್ಯ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಮನೆಯ ಮೌಲ್ಯ ಉಪನೊಂದಾಣಾಧಿಕಾರಿಯ ಕಚೇರಿಯವರ ಪ್ರಕಾರ 1 ಲಕ್ಷ ರೂಪಾಯಿ ಬೆಲೆ ಈಗ

ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಮೌಲ್ಯ ಕಡಿಮೆ ಇದ್ದರೂ ಸಹ ಇದೇ ನ್ಯಾಯಾಲಯದ ವ್ಯಾಪ್ತಿ ಪ್ರದೇಶಕ್ಕೆ ಒಳಪಡಬೇಕು ಎನ್ನುವ ಉದ್ದೇಶದಿಂದ ದಾವಾಸ್ವತ್ತಿಗೆ ನಾನು ಹೆಚ್ಚಿನ ಮೌಲ್ಯವನ್ನು ತೋರಿಸಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿಯನ್ನು ನಾನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಆಗದೇ ಇದ್ದರೂ ಸಹ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಆಗಿವೆ ಎಂದು ನಾನು ವಾದಪತ್ರದಲ್ಲಿ ಸುಳ್ಳು ಉಲ್ಲೇಖಿಸಿದ್ದೇನೆ ಎಂದರೆ ಸರಿಯಲ್ಲ ಈ ದಾವೆಯನ್ನು ನಾನು ಕಾಲಮಿತಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಕಾಲಮಿತಿಯ ಅವಧಿಯ ನಂತರ ಸಲ್ಲಿಸಿರುವ ಕಾರಣಕ್ಕಾಗಿ ದಾವಾಸ್ವತ್ತುಗಳಲ್ಲಿ ನನಗೆ ಯಾವುದೇ ಹಿಸ್ಸೆ ಮತ್ತು ಹಕ್ಕನ್ನು ಕೇಳುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯಲ್ಲಿ ನಾನು O.S No.117/2012 ರ ದಾವೆಯನ್ನು ಸಲ್ಲಿಸಿದ್ದೆ , ಸದರಿ ದಾವೆಯಲ್ಲಿ ಆದ ತೀರ್ಪಿನ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸದೇ ಇರುವ ಕಾರಣಕ್ಕಾಗಿ ಈ ದಾವೆ ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ವೈಯಕ್ತಿಕವಾಗಿ ಕಂದಾಯ ಪಾವತಿಸಿರುವುದಿಲ್ಲ , ಸಾಕ್ಷಿ ಮುಂದುವರೆದು ಜಂಟಿಯಾಗಿ ಪಾವತಿಸಿದ್ದೇವೆ ಎಂದು ನುಡಿಯುತ್ತಾರೆ . ದಾವಾ ಸ್ವತ್ತುಗಳಿಗೆ ನಾವು ಸಾಮೂಹಿಕವಾಗಿ ಕರ ಪಾವತಿ ಮಾಡಿದ್ದೇವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ದಾವೆಯ ವ್ಯಾಜ್ಯ ಕಾರಣ ಯಾವಾಗ ಉಂಟಾಗಿದೆ ಎನ್ನುವುದು ನನಗೆ ದ್ಯಾಸ (ನೆನಪು) ಇಲ್ಲ . ದಾವಾ ಪತ್ರದಲ್ಲಿ ನಾನು ನಮ್ಮ ಕುಟುಂಬದ ವಂಶಾವಳಿಯನ್ನು ಉದ್ದೇಶಪೂರ್ವಕವಾಗಿ

ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಗೆ ಮಾತ್ರ ಹಕ್ಕು ಮತ್ತು ಹಿಸ್ಸೆ ಇದೆ ಉಳಿದ ಪಕ್ಷಗಾರರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.